ದಿನಾಂಕಃ 13.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀಸವಾಲುಃ** ಪ್ರತಿವಾದಿಯ ಪರ ಶ್ರೀ ಎಮ್ ಬಿ ವಕೀಲರಿಂದಃ

8. ವಾದಿ 10 ಎಕರೆ ಜಮೀನಿಗೆ ದಾವೆ ಹೂಡಿರುತ್ತಾರೆ. ಒಟ್ಟು ಕುಟುಂಬದ ಆಸ್ತಿಗೆ ದಾವೆ ಹೂಡಲಾಗಿದೆ. ಸದರಿ 10 ಎಕರೆ ಜಮೀನು ಎತ್ತನಹಳ್ಳಿಯಲ್ಲಿವೆ. ಸುಮಾರು 3 ವರ್ಷದ ಹಿಂದೆ ಭಾಗ ಕೇಳಿದ್ದರು. ಆ ಸಮಯದಲ್ಲಿ ನಮ್ಮೂರಿನ ಹಿರಿಯರು ನಮ್ಮ ಯಜಮಾನರು ಸೇರಿದ್ದರು. ದಿನಾಂಕ , ತಿಂಗಳು , ವರ್ಷ ಗೊತ್ತಿಲ್ಲ. ಏಕೆಂದರೆ ನನಗೆ ಓದಲು ಬರೆಯಲು ಬರುವುದಿಲ್ಲ. ಈ ವಿಷಯವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ .

9. ಜೊಂಪನಹಳ್ಳಿ ಗ್ರಾಮದ ಸರ್ವೇ ನಂ.21/102 ರಲ್ಲಿ 3 ಎಕರೆ 6 ಗುಂಟೆ ಜಮೀನು ಪುಟ್ಟಗೌರಮ್ಮ ಅವರಿಗೆ ಮಂಜೂರಾದ ಸ್ವತ್ತು ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಇಬ್ಬರು ಹೆಂಡತಿಯರು. ಸದರಿಯವರು ಯಾವುದೇ ಅರ್ಜಿ ಸಲ್ಲಿಸಿರಲಿಲ್ಲ. 1992-93 ರಲ್ಲಿ ಪುಟ್ಟಗೌರಮ್ಮನವರು ತಾನು ವ್ಯವಸಾಯ ಮಾಡುತ್ತಿದ್ದೇನೆಂದು ಅರ್ಜಿ ಸಲ್ಲಿಸಿದ್ದರೆಂದರೆ ಸರಿಯಲ್ಲ. 30.09.1994 ರಲ್ಲಿ ಸದರಿ ಜಮೀನು ಪುಟ್ಟಗೌರಮ್ಮ ಅವರ ಹೆಸರಿನಲ್ಲಿ ಮಂಜೂರಾಗಿರುತ್ತದೆ ಎಂದರೆ ಎಲ್ಲಾ ನಮ್ಮ ಅಣಣ್ಣನೆ ಮಾಡಿದ್ದು , ಅದು ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ಸಾಕ್ಷಿ ಹೇಳುತ್ತಾರೆ. ದಿಃ 16.07.1999 ರಲ್ಲಿ ಪುಟ್ಟಗೌರಮ್ಮ ಇವರ ಹೆಸರಿಗೆ ಸಾಗುವಳಿ ಚೀಟಿ ಕೂಡ ನೀಡಲಾಗಿದೆ ಎಂದರೆ ಸರಿಯಲ್ಲ.

10. ಅದಕ್ಕೆ ಪುಟ್ಟಗೌರಮ್ಮ ಸರಕಾರಕ್ಕೆ ಭರಿಸುವಂತಹ ಹಣ ಕೂಡ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ, ತಂದೆ-ತಾಯಿ ಎಲ್ಲಾ ಸೇರಿ ಕಟ್ಟಿರುತ್ತಾರೆ. ನನ್ನ ತಂದೆ ಅಥವಾ ತಾಯಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಬದುಕಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ಪುಟ್ಟಗೌರಮ್ಮ ಅವರ ಸ್ವಯರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನಾನಗಲಿ ನನ್ನ ಇಬ್ಬರು ಅಣ್ಣ ತಮ್ಮಂದಿದರಾಗಲಿ ಪುಟ್ಟಗೌರಮ್ಮ ಅವರ ವಿರುದ್ಧ ಸರ್ವೇ ನಂ. 21/102 ಕ್ಕೆ ಸಂಬಂಧಪಟ್ಟಂತೆ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾವೆಲ್ಲಾ ಒಟ್ಟಿಗೆ ಅರ್ಜಿ ಸಲ್ಲಿಸಿದ್ದೇವು.

11. ಸರ್ವೇ ನಂ.14/1 ,14/2 ಮತ್ತು 14/3 ಒಟ್ಟು ವಿಸ್ತೀರ್ಣ 9 ಎಕರೆ 1 ಗುಂಟೆ ಜಮೀನು ಹೆಚ್ ಡಿ ಕೋಟೆ ತಾ. ಹಂಪಾಪುರ ಹೋಬಳಿ, ಗಂಗಡ ಹೊಸಳ್ಳಿ ಗ್ರಾಮದ ಮಣಸೇಗೌಡರ ಮಗ ಎಮ್ ಕರೀಗೌಡ ಇವರಿಗೆ ಭೋಗ್ಯ ಮಾಡಿದ್ದರು ಎಂದರೆ ಸರಿ. ಇದುವರೆಗೂ ಸದರಿ ಭೋಗ್ಯದ ಜಮೀನನ್ನು ತಿರುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ಭೋಗ್ಯ ತಿರುವಳಿ ಮಾಡಿದ್ದಕ್ಕೆ ಸಂಬಂಧಪಟ್ಟಂತೆ ದಾಖಲೆ ಹಾಜರುಪಡಿಸಿಲ್ಲ.

12. ಗ್ರಾಮದ ದೊಡ್ಡಬೈರಯ್ಯ ಗೊತ್ತು ಎಂದರೆ ಹೌದು ಎಂದು ಸಾಕ್ಷಿ ಹೇಳುತ್ತಾರೆ. ದೊಡ್ಡ ಬೈರಯ್ಯನಿಗೆ 3 ಜನ ಮಕ್ಕಳು ಎಂದರೆ ಸರಿ. ಅವರ ಹಿರಿಮಗಳು ಬೋರಮ್ಮ , ಇನ್ನೊಬ್ಬರ ಹೆಸರು ಗವಿಸಿದ್ದಯ್ಯ , 3 ನೇಯವರು ಚಿಕ್ಕಬೈರಯ್ಯ ಎಂದರೆ ಸರಿ. ಸಿದ್ದಯ್ಯ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸಿದ್ದಯ್ಯ ಇವರಿಗೆ ಶಿವಕುಮಾರಿ ಮತ್ತು ಸಿದ್ದರಾಜು ಎಂಬ ಎರಡು ಮಕ್ಕಳೆಂದರೆ ಸರಿ. ಶಿವಕುಮಾರಿ , ಸಿದ್ದಲಿಂಗಸ್ವಾಮಿ ಅಂದರೆ ಪಿಡಬ್ಲ್ಯೂ 4 ರವರ ಹೆಂಡತಿ ಎಂದರೆ ಸರಿ. ಶಿವಕುಮಾರಿ ಮತ್ತು ಸಿದ್ದಲಿಂಗಸ್ವಾಮಿ ಅವರಿಗೆ 4 ಜನ ಮಕ್ಕಳೆಂದರೆ ಸರಿ. 1. ಪ್ರೇಮಕುಮಾರ 2. ಶಿವಕುಮಾರ 3. ಶಿವರಾಜು 4. ಚಂದ್ರು ಎಂದರೆ ಸರಿ. ಶಿವಕುಮಾರಿ ಮತ್ತು ಸಿದ್ದಲಿಂಗಸ್ವಾಮಿ ಅವರಿಗೆ ಪೂರ್ಣಿಮಾ ಎಂಬ ಒಬ್ಬಳೆ ಮಗಳು ಎಂದರೆ ಸರಿ. ಸದರಿ ಪೂರ್ಣಿಮಾ ಅವರನ್ನು 3 ನೇ ವಾದಿ ರವಿ ಅವರಿಗೆ ಮದುವೆ ಮಾಡಲಾಗಿದೆ ಎಂದರೆ ಸರಿ.

13. ಬೋರಮ್ಮ ಇವರಿಗೆ ಮಾದೇವಯ್ಯ ಎಂಬ ಒಬ್ಬನೇ ಮಗ ಎಂದರೆ ಸರಿ. ಮಾದೇವಯ್ಯನಿಗೆ ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳೆಂದರೆ ಸರಿ. ಮಾದೇವಯ್ಯ ಇವರ ಎರಡನೇ ಮಗಳು ಪಾರ್ವತಿ ಅವರನ್ನು 2 ನೇ ವಾದಿ ರೇವಣ್ಣ ಇವರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ಪೋಲಿಸ್ ಸಿದ್ದಯ್ಯ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದರೆಂದರೆ ಸರಿ.

14. 1 ನೇ ವಾದಿ ನಿಂಗಮ್ಮ ಇವರು ಭುಗತಗಳ್ಳಿ ಗ್ರಾಮದವರು. ಸದರಿಯವರು ಮೈಸೂರಿನ ಲಲಿತಾದ್ರಿಪುರ , ಸಟ್ಟಹಳ್ಳಿ ರಸ್ತೆಯಲ್ಲಿರುವ ಗಾಯತ್ರಿಫಾರಂ ನಲ್ಲಿ ಕೆಲಸ ಮಾಡುತ್ತಿದ್ದರೆಂದರೆ ಗೊತ್ತಿಲ್ಲ. ರೇವಣ್ಣ ಮತ್ತು ರವಿರವರು ಸೆಟ್ಟಹಳ್ಳಿ ಯಲ್ಲಿಯೆ ಜನಿಸಿರುತ್ತಾರೆಂದರೆ ಅವರು ಅಲ್ಲಿಯೆ ಇದ್ದರೆಂದು ಸಾಕ್ಷಿ ಹೇಳುತ್ತಾರೆ. ಪೋಲಿಸ್ ಸಿದ್ದಯ್ಯ ಇವರು ನಿಂಗಮ್ಮ ಅವರನ್ನು ಅಲ್ಲಿ ಕೆಲಸಕ್ಕೆ ಸೇರಿಸಿದ್ದರೆಂದರೆ ಗೊತ್ತಿಲ್ಲ. ಸದರಿಯವರ ಮಕ್ಕಳ ವ್ಯಾಸಾಂಗದ ಖರ್ಚನ್ನು ಪೋಲಿಸ್ ಸಿದ್ದಯ್ಯ ನೋಡಿಕೊಳ್ಳುತ್ತಿದ್ದರೆಂದರೆ ನನಗೆ ಗೊತ್ತಿಲ್ಲ. ಪೋಲಿಸ್ ಸಿದ್ದಯ್ಯ ಅವರಿಗೆ ನಿಂಗಮ್ಮ ಎರಡನೇ ಹೆಂಡತಿ ಎಂದು ಹೇಳುತ್ತಾರೆ ಎಂದರೆ ಸರಿಯಲ್ಲ.

15. ರೇವಣ್ಣ , ರವಿ , ಗುರುಲಿಂಗಯ್ಯ ಮೂವರು ಪೋಲಿಸ್ ಸಿದ್ದಯ್ಯ ಅವರಿಗೆ ಜನಿಸಿದ ಮಕ್ಕಳು ಎಂದರೆ ಸರಿಯಲ್ಲ. ಪೋಲಿಸ್ ಸಿದ್ದಯ್ಯ ಇವರಿಗೆ ಎಲಚನಹಳ್ಳಿ ಗ್ರಾಮದಲ್ಲಿ ಸರ್ವೇ ನಂ. 16/1 ರಲ್ಲಿ 6 ಎಕರೆ 14 ಗುಂಟೆ ಜಮೀನಿದೆ ಎಂದರೆ ಸುಳ್ಳು. ಸದರಿ ಜಮೀನಿನಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ನಾನು ಮತ್ತು ಸಿದ್ದಲಿಂಗಸ್ವಾಮಿ ಸೇರಿ ಪ್ರಸ್ತುತ ದಾವೆ ಹಾಕಿಸಿರುತ್ತೇವೆ ಎಂದರೆ ಸರಿಯಲ್ಲ. ಸಿದ್ದಲಿಂಗಸ್ವಾಮಿ ಸಹ ಇದೇ ನ್ಯಾಯಾಲಯದಲ್ಲಿ ದಿ.19.12.1997 ರಲ್ಲಿ ನಾನು ಚಕ್ರ ಚಿಕ್ಕಯ್ಯ ಇವರ ಮಗ ನನಗೂ ಕೂಡ ಭಾಗ ಬರಬೇಕೆಂದು ದಾವೆ ಸಲ್ಲಿಸಿದ್ದರೆಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ಗಂಡ ಚೆಲುವಯ್ಯ ಸದರಿ ಸಿದ್ದಲಿಂಗಸ್ವಾಮಿ ಚಕ್ರ ಚಿಕ್ಕಯ್ಯ ಅವರ ಮಗ ಎಂದು ಸಾಕ್ಷಿ ನುಡಿದಿದ್ದರು ಎಂದರೆ ನನಗೆ ಗೊತ್ತಿಲ್ಲ.

16. ನಾನು ಸಹ ರತ್ನಯ್ಯ , ಪುಟ್ಟಗೌರಮ್ಮ ಅವರ ಆಸ್ತಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಶಿವಮ್ಮ ಎಲ್ಲಿ ವಾಸವಾಗಿದ್ದಾರೆ ನನಗೆ ಗೊತ್ತಿಲ್ಲ. ಶಿವಮ್ಮ ಎಲಚನಹಳ್ಳಿ ಗ್ರಾಮದಲ್ಲಿ ವಾಸವಿಲ್ಲ ಎಂದರೆ ಸರಿ. ಶಿವಮ್ಮ ಯಾವುದೇ ಯಜಮಾನಿಕೆ ಮಾಡುವುದಿಲ್ಲ ಎಂದರೆ ಸರಿ. ಸದರಿಯವರು ಯಾವುದೇ ಮನೆ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿ. ಶಿವಮ್ಮ ಲೆಕ್ಕ ಪತ್ರ ಕೊಡುತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಸೇರಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆಂದರ ಸರಿಯಲ್ಲ. ನನ್ನ ಅಣ್ಣ ಸಿದ್ದಯ್ಯನಿಗೆ ಅವರ ಜೀವಿತ ಕಾಲದಲ್ಲಿ ಅವರ ಹೆಂಡತಿ ಬಿಟ್ಟರೆ ಬೇರೆ ಹೆಂಡತಿ ಇಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಇಬ್ಬರು ಹೆಣ್ಣು ಹಾಗೂ ಇಬ್ಬರು ಗಂಡು ಮಕ್ಕಳು ಬಿಟ್ಟರೆ ಬೇರೆ ಯಾವ ವಾರಸುದಾರರಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿಯವರಿಗೆ ಇಬ್ಬರು ಹೆಣ್ಣು ಮಕ್ಕಳು 7 ಗಂಡು ಮಕ್ಕಳು ಎಂದು ಸಾಕ್ಷಿ ಹೇಳುತ್ತಾರೆ. ಇದನ್ನು ನಾನು ಕೇವಲ ಬಾಯಿ ಮಾತಿನಲ್ಲಿ ಹೇಳುತ್ತಿದ್ದು , ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ಪುಟ್ಟಗೌರಮ್ಮ ದಿಃ11.10.2014 ರವರೆಗೆ ತನ್ನ ಗಂಡ ಮಕ್ಕಳೊಂದಿಗೆ ಆರೋಗ್ಯವಂತರಾಗಿ ಇದ್ದರು ಎಂದರೆ ಸರಿಯಲ್ಲ.

17. ದಿಃ 11.11.1995 ರವರೆಗೆ ಸಿದ್ದಯ್ಯ ಅವರು ಮರಣ ಹೊಂದುವವರೆಗೆ ತನ್ನ ಹೆಂಡತಿ ಪುಟ್ಟಗೌರಮ್ಮ ಅವರೊಂದಿಗೆ ವಾಸವಿದ್ದರೆಂದರೆ ಸರಿಯಲ್ಲ. ಸದರಿಯವರು ಎರಡು ಕಡೆ

ವಾಸವಿದ್ದರೆಂದು ಸೃಷ್ಟಿ ಮಾಡಿಕೊಂಡು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೋಲಿಸ್ ಸಿದ್ದಯ್ಯನಿಗೆ ಹುಟ್ಟಿರುವ ಮಕ್ಕಳನ್ನು ನಾನು ನನ್ನ ಅಣ್ಣನಿಗೆ ಹುಟ್ಟಿರುವ ಮಕ್ಕಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ ಎ ಎಸ್ ವಕೀಲರು 3 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ ಅರ್ಜಿಯನ್ನು ಪುರಸ್ಕರಿಸಿ , ಅನುಮತಿ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.